ವಿಷಯ : ಬೆಂಗಳೂರಿನ ಫ್ರೇಜರ್ ಟೌನ್ ಬಳಿ ಇರುವ ಕಸಾಯಿಖಾನೆಯ ಸ್ಥಳಾಂತರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 182(267)

ಶ್ರೀ. ಎನ್ . ರಾಜಣ್ಣ(ಭಾರತೀನಗರ)

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಬೆಂಗಳೂರಿನ ಫ್ರೇಜರ್ ಟೌನ್ ಬಳಿ ಕಸಾಯಿ ಖಾನೆ ಇರುವುದು ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಸಾಯಿ ಖಾನೆಯಿಂದ ಬರತಕ್ಕ ಕಲ್ಮಶಗಳನ್ನು ತೆರೆದ ಚರಂಡಿಯಲ್ಲಿ ಬಿಡುತ್ತಿರುವುದರಿಂದ 2-3 ಕಿ.ಮಿ. ಪ್ರದೇಶದಲ್ಲಿ ವಾತಾವರಣ ಕಲುಷಿತಗೊಂಡಿರುವುದು ನಿಜವೇ?

ಇ) ಈ ಕಸಾಯಿ ಖಾನೆಯನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಸರ್ಕಾರದವರು ಕ್ರಮ ಕೈಗೊಳ್ಳುತ್ತಿದ್ದಾರೆಯೆ?

ಶ್ರೀ ಬಿ.ಎನ್. ಬಚ್ಚೇಗೌಡ :
(ಪಶು ಸಂಗೋಪನಾ ರಾಜ್ಯ ಸಚಿವರು)

ಅ) ಹೌದು

ಆ) ಇಲ್ಲ.

ಇ) ಇಲ್ಲ.

ವಿಷಯ: ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಶುವೈದ್ಯ ಶಾಲೆಗಳು ಹಾಗೂ ಆಸ್ಪತ್ರೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:183(264)

ಶ್ರೀ. ಎನ್. ರಾಜಣ್ಣ (ಭಾರತೀನಗರ)

ಮಾನ್ಯ, ಪಶುಸಂಗೋಪನಾ ರಾಜ್ಯ ಸಚಿವರು, ಈ ಕೆಳಕ,ಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಪಶುವೈದ್ಯ ಶಾಲೆಗಳು ಹಾಗೂ ಪಶುವೈದ್ಯ ಆಸ್ಪತ್ರೆಗಳ ಒಟ್ಟು ಸಂಖ್ಯೆ ಎಷ್ಟು?

ಆ) ಬೆಂಗಳೂರು ನಗರದಲ್ಲಿ ಅಂದಾಜು ಇರತಕ್ಕ ಪಶುಗಳ ಹಾಗೂ ಇತರ ಪ್ರಾಣಿಗಳ ಒಟ್ಟು ಸಂಖ್ಯೆ ಎಷ್ಟು? (ವಿವರ ನೀಡುವುದು)

ಇ) ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿರತಕ್ಕ ಪಶುವೈದ್ಯ ಶಾಲೆಗಳು ಹಾಗೂ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಅ)	**1**	**ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ**	**05**
	2	ಪಶು ಚಿಕಿತ್ಸಾಲಯ	13
	3	ಪಶುವೈದ್ಯಾ ಆಸ್ಪತ್ರೆ	09
		ಒಟ್ಟು	27
ಆ)	**1**	**ಪಶುಗಳ ಸಂಖ್ಯೆ**	**27,820**
	2	ಇತರೆ ಪ್ರಾಣಿಗಳ ಸಂಖ್ಯೆ	20,588
ಇ)	**1**	**ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ.**	
	2	ಪಶುವೈದ್ಯಾ ಆಸ್ಪತ್ರೆ ಪ್ರಾರಂಭಿಸಲು ಉದ್ದೇಶಿಸಿಲ್ಲ.	

ವಿಷಯ : ಕಾಪು ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಕೆಲಸ

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ:184(40)
ಮಾನ್ಯ ಲೊಕೋಪಯೋಗಿ ಸಚಿವರು

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಕಾಪು ಕ್ಷೇತ್ರದ ಕಾಪು-ಇನ್ನಂಜೆ-ಬಂಟ್‌ಕಲ್ ರಸ್ತೆಯ ಕಾಮಗಾರಿ ಯಾವ ಹಂತದಲ್ಲಿದೆ ಹಾಗೂ ಎಂದು ಈ ಕಾಮಗಾರಿಯನ್ನು ಮುಗಿಸಲಾಗುವುದು.

ಆ) ಈ ಎರಡೂ ಕಾಮಗಾರಿಗಳಿಗೆ ಎಷ್ಟುಹಣ ಮಂಜೂರಾಗಿದೆ

ಇ) ಕಾಮಗಾರಿಗಳನ್ನು ಸಂಪೂರ್ಣಗೊಳಿಸಲಾಗುವುದು?

ಶ್ರೀಶಿವಾನಂದ,ಹೆಚ್.ಕೌಜಲಗಿ
ಲೊಕೋಪಯೋಗಿ ಸಚಿವರು.

ಅ) ಸದರಿ ರಸ್ತೆಯ ಕಿ.ಮಿ4.30ರಿಂದ 4.42 ಹಾಗೂ ಕಿಮೀ. 5.02 ರಿಂದ 5.60 ಎರಡೂ ಚಾಚುಗಳ ಡಾಂಬರೀಕರಣ ಕಾಮಗಾರಿಯ ಟೆಂಡರು ನಿಷ್ಕರ್ಷೆಯ ಹಂತದಲ್ಲಿದೆ. ಈ ಕಾಮಗಾರಿಯನ್ನು ಮೇ 1995ರೊಳಗಾಗಿ ಮುಗಿಸಲಾಗುವುದು.